ವಕ್ಫ್ ಮಂಡಳಿಯ ಆಸ್ತಿ ಒತ್ತುವರಿಯಾಗಿರುವುದು

(205) 278

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ(ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿನ ವಕ್ಫ್ ಮಂಡಳಿಗೆ ಸೇರಿದ ಆಸ್ತಿಗಳೆಷ್ಟು? (ಸಂಪೂರ್ಣ ವಿವರ ನೀಡುವುದು)

ಆ) ಈ ಮಂಡಳಿಯ ಆಸ್ತಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಆಸ್ತಿ ಒತ್ತುವರಿಯಾಗಿದೆ (ವಿವರ ನೀಡುವುದು)?

ಈ) ಈ ರೀತಿ ಒತ್ತುವರಿ ಆಸ್ತಿಯನ್ನು ಮಂಡಳಿಯು ಹಿಂಪಡೆಯಲು ಏನಾದರೂ ಕ್ರಮ ಜರುಗಿಸಲಾಗಿದೆಯೇ?(ವಿವರ ನೀಡುವುದು)

ಶ್ರೀ ಎಸ್.ಕೆ.ಬೆಳ್ಳುಬಿ ಕೃಷಿ ಮಾರುಕಟ್ಟೆ,
ಹಜ್ ಮತ್ತು ವಕ್ಫ್ ಸಚಿವರು.

ಅ) ಬೀದರ್ ಜಿಲ್ಲೆಯಲ್ಲಿನ ವಕ್ಫ್ ಮಂಡಳಿಗೆ ಸೇರಿದ ತಾಲ್ಲೂಕುವಾರು ವಕ್ಫ್ ಆಸ್ತಿಗಳ ವಿವರ ಈ ಕೆಳಕಂಡಂತೆ ಇರುತ್ತವೆ.

ತಾಲ್ಲೂಕು	ಒಟ್ಟು ಸ್ವತ್ತುಗಳು	ಅವುಗಳ ವಿಸ್ತೀರ್ಣ ಎ.ಗುಂಪು
ಬೀದರ್	826	4851–36
ಭಾಲ್ಕಿ	313	2468–04
ಔರಾದ್	386	0310–21
ಹುಮ್ನಾಬಾದ್	576	4295–37
ಬಸವಕಲ್ಯಾಣ	485	2202–05
	2586	14,108–23

ಆ) ಹೌದು

ಇ) ಶೇಕಡ 14% ಜಮೀನು ಒತ್ತುವರಿಯಾಗಿದ್ದು, ಇದರ ವಿಸ್ತೀರ್ಣ 1974–06 ಎಕರೆ ಆಗಿರುತ್ತದೆ.

ಈ) ವಕ್ಫ್ ಕಾಯ್ದೆ 1995 ಕಲಂ 54ರಂತೆ ಪ್ರಕರಣಗಳು ದಾಖಲಿಸಿಕೊಂಡು ವಿಚಾರಣೆ ನಡೆಸಲಾಗುತ್ತಿದೆ.

ಮಸೀದಿ ಹಾಗೂ ಶಾದಿ ಮಹಲ್‌ಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಯ ಬಗ್ಗೆ

(196) 322

ಶ್ರೀ ಡಾ. ಮಹದೇವಪ್ಪ ಹೆಚ್.ಸಿ

(ಟಿ.ನರಸೀಪುರ)

ಅ) ಟಿ.ನರಸೀಪುರ ತಾಲ್ಲೂಕಿನಲ್ಲಿ ಇರುವ ಮಸೀದಿಗಳು ಹಾಗೂ ಶಾದಿ ಮಹಲ್‌ಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಆ) ಮಸೀದಿಗಳು ಹಾಗೂ ಶಾದಿ ಮಹಲ್‌ಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು? (ವರ್ಷವಾರು ಹಾಗೂ ಮಸೀದಿಗಳವಾರು ವಿವರಗಳನ್ನು ನೀಡುವುದು)

ಇ) ಟಿ.ನರಸೀಪುರ ತಾಲ್ಲೂಕಿನಲ್ಲಿ ಶಾದಿ ಮಹಲ್‌ಗಳ ಸಂಖ್ಯೆ ಎಷ್ಟು; ವಿವರಗಳನ್ನು ನೀಡುವುದು. ಈ ಶಾದಿ ಮಹಲ್‌ಗಳ ನಿರ್ಮಾಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು? (ವರ್ಷವಾರು ಹಾಗೂ ಶಾದಿ ಮಹಲ್‌ಗಳವಾರು ವಿವರಗಳನ್ನು ನೀಡುವುದು)

ಈ) ಮಸೀದಿಗಳಿಗೆ ಹಾಗೂ ಶಾದಿ ಮಹಲ್‌ಗಳಿಗೆ ನೀಡುತ್ತಿರುವ ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು ಹಾಗೂ ಯಾವಾಗಿನಿಂದ ಜಾರಿಗೆ ತರಲಾಗುವುದು;

ಉ) ಟಿ. ನರಸೀಪುರ ತಾಲ್ಲೂಕಿನಲ್ಲಿ ಪ್ರಸ್ತುತ ನಿರ್ಮಾಣವಾಗುತ್ತಿರುವ ಶಾದಿ ಮಹಲ್‌ಗಳ ಕಾಮಗಾರಿಯನ್ನು ಸಕಾಲದಲ್ಲಿ ಪೂರ್ಣಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;